**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಲಘಟಗಿ**

**ಸಿ.ಸಿ ನಂ.72-2024**

ಪಿರ್ಯಾದಿದಾರರು ಕರ್ನಾಟಕ ಸರಕಾರದ ಪರವಾಗಿ
ಕಲಘಟಗಿ ಪೋಲಿಸ ಠಾಣೆ.

ವಿರುದ್ಧ

ಆಪಾದಿತ ಮಕ್ತುಮದಹುಸೇನ ಹೆಬ್ಬಳ್ಳಿ

ಆರೋಪಣೆ

ಶ್ರೀ ಗಣೇಶ ಎನ್, ಎಂ ಎ ಎಲ್ ಎಲ್ ಬಿ. ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ. ಕಲಘಟಗಿ ಆದ ನಾನು ನಿಮ್ಮ ಮೇಲೆ ಹೊರಿಸುವ ಆಪಾದನೆ ಈ ಕೆಳಗಿನಂತಿದೆ..

ಕಲಘಟಗಿ ಪೋಲಿಸ ಠಾಣಾ ಹದ್ದಿಯ ಪೈಕಿ ಕಲಘಟಗಿ ಶಹರದ ಬಮ್ಮಿಗಟ್ಟಿ ಕ್ರಾಸದಲ್ಲಿ ಮುಂಡಗೋಡ ಕಡೆಗೆ ಸಾಗಿದ ರಸ್ತೆ ಮೇಲೆ ದಿನಾಂಕಃ 01-08-2023 ರಂದು ರಾತ್ರಿ 9-30 ಗಂಟೆಗೆ ಆಪಾದಿತನಾದ ನೀನು ಚಾಸಾ-4 ರವರು ನೀಡಿದ ಹಣವನ್ನು ವಾಪಸ ಕೊಡುವಂತೆ ಕೇಳಿದಾಗ ನಾನು ನಿನಗೆ ಹಣವನ್ನು ವಾಪಸ ಕೊಡುವುದಿಲ್ಲ ಏನು ಮಾಡಕೊತಿಯೋ ಮಾಡಿಕೋ ಹಡಸು ಸೂಳೇ ಮಗನ , ಬೋಸಡಿ ಮಗನ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆಭಂಗವನ್ನುಂಟು ಮಾಡಿದ್ದು . ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಎರಡನೆಯದಾಗಿ ಮೇಲಿದ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆಪಾದಿತನಾದ ನೀನು ಚಾಸಾ-4 ರವರಿಗೆ ಚಾಕುವಿನಿಂದ ತಲೆಗೆ ಅಲ್ಲಿಲ್ಲಿ ಹೊಡೆದು ರಕ್ತಗಾಯಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ , ಸಮಯ ಮತ್ತು ಸ್ಥಳದಲ್ಲಿ

ಆಪಾದಿತನಾದ ನೀನು ಚಾಸಾ –4 ರವರಿಗೆ ಜೀವ ಬೆದರಿಕೆ ಹಾಕಿ ಬಯೋತ್ಪಾದನೆ ಉಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಪ್ರಶ್ನೆಃ1) ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?
ಆಪಾದಿತನ ಉತ್ತರಃ ತಿಳಿಯಿತು.

ಪ್ರಶ್ನೆಃ2 ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೊ?
ಆಪಾದಿತನ ಉತ್ತರಃ ಸುಳ್ಳು ವಿಚಾರಣೆಯಾಗಬೇಕು..

(ಆಪಾದಿತನಿಗೆ ಆಪಾದನೆಯನ್ನು ಓದಿ ತಿಳಿಸಿ ನಂತರ ಆಪಾದಿತನ ಉತ್ತರವನ್ನು ಪಡೆಯಲಾಗಿದೆ.)

ಸ್ಥಳಃ ಕಲಘಟಗಿ
ದಿನಾಂಕಃ 30-12-2024

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳು
ಕಲಘಟಗಿ.